

ಗಂಗಣ್ಣ ಎಂಬ ಪಾತ್ರದ ಮೂಲಕ ಹಳ್ಳಿಯ ಸಮಸ್ಯೆಯೊಂದನ್ನು ಬಿಂಬಿಸುವ ಪ್ರಯತ್ನವನ್ನು ಈ ಕಿರುಚಿತ್ರ ಮಾಡುತ್ತದೆ. ಹಳ್ಳಿಗಳನ್ನು ತೊರೆದು ಯಾಕೆ ಎಲ್ಲರೂ ನಗರಮುಖಿಗಳಾಗುತ್ತಿದ್ದಾರೆ ಎಂಬ ಪ್ರಶ್ನೆಯನ್ನು ಕೇಳಿಕೊಂಡು ಅದಕ್ಕೆ ಉತ್ತರವನ್ನೂ ಕೊಡುತ್ತದೆ.

■ ಗೌರಿ

# ಬೆನ್ನ ಹಿಂದಿನ ಸಮೃದ್ಧಿ ಕಾಣುವ ಹಂಬಲ

ಹಳ್ಳಿಯಲ್ಲಿ ಸಮೃದ್ಧಿಯಿದೆ; ಅನುಕೂಲಗಳಿವೆ. ಬೇಕಾದಷ್ಟು ಸಮಯ ಇರುತ್ತದೆ. ಆದರೆ ಯಾಕೆ ಯಾರೂ ಹಳ್ಳಿಗಳತ್ತ ಮುಖ ಮಾಡುತ್ತಿಲ್ಲ? ಯಾಕೆಂದರೆ ಅವರೆಲ್ಲರೂ ಹಳ್ಳಿಗಳಿಗೆ ಬೆನ್ನುಮಾಡಿ ನಗರಮುಖಿಗಳಾಗಿ ನಿಂತಿದ್ದಾರೆ. ಬೆನ್ನ ಹಿಂದಿರುವ ಹಳ್ಳಿಬದುಕಿನ ಸಮೃದ್ಧಿ ಅವರಿಗೆ ಕಾಣಿಸುತ್ತಿಲ್ಲ.

ಹೀಗೆ ಒಂದು ಪ್ರಶ್ನೆಯನ್ನು ಎತ್ತಿಕೊಂಡು ಅದಕ್ಕೆ ಆಕರ್ಷಕವಾದ, ಮೇಲ್ನೋಟಕ್ಕೆ 'ಹೌದು ಹೌದು' ಅನಿಸುವ ರಮ್ಯ ಉತ್ತರವನ್ನೂ ಕೊಡುವ ಕಿರುಚಿತ್ರ 'ಬೆನ್ನಿಗೆಲ್ಲಿಯ ಕಣ್ಣು'.

ನರೇಶ ಹೆಗಡೆ ದೊಡ್ಮರಿ ಈ ಕಿರುಚಿತ್ರವನ್ನು ನಿರ್ದೇಶಿಸಿದ್ದಾರೆ. ಉತ್ತರ ಕನ್ನಡದ ಹಳ್ಳಿಯೊಂದರಲ್ಲಿ ತಂದೆಯೊಟ್ಟಿಗೆ ಬದುಕುತ್ತಿರುವ 'ಗಂಗಣ್ಣ'ನ ಪಾತ್ರದ ಮೂಲಕ ಹಳ್ಳಿಬದುಕಿನ ಸಮಸ್ಯೆಯೊಂದಕ್ಕೆ ಕನ್ನಡಿ ಹಿಡಿಯುವ ಪ್ರಯತ್ನ ಅವರದ್ದು. ಗಂಗಣ್ಣನಿಗೆ 36 ವರ್ಷ ವಯಸ್ಸು. ಆದರೆ ಇನ್ನೂ ಮದುವೆಯಾಗಿಲ್ಲ. 'ಒಂದು ಮದುವೆ ಅಂತ ಆಗಿಬಿಟ್ಟರೆ ಸಾಕಿತ್ತು' ಎಂಬಷ್ಟು ಅವನು ಮದುವೆಗಾಗಿ ಹಂಬಲಿಸುತ್ತಿದ್ದಾನೆ. ಬೇರೆ ಜಾತಿಯ ಹುಡುಗಿಯನ್ನು ಮದುವೆಯಾಗುವ ಸಾಧ್ಯತೆ ಇದ್ದರೂ ವೃದ್ಧತಂದೆ ಅದಕ್ಕೆ ಒಪ್ಪುತ್ತಿಲ್ಲ. ಮದುವೆಯ ಬಯಕೆ ಮತ್ತು ಸಂಪ್ರದಾಯದ ಸಂಕೋಲೆಗಳ ಸಂಘರ್ಷದ ನಡುವೆ ಗಂಗಣ್ಣ ಹೈರಾಣಾಗಿದ್ದಾನೆ. ಪಟ್ಟಣದಿಂದ ವಿಡಿಯೊ ಮಾಡಿಕೊಳ್ಳಲು ಬಂದವರ ಕ್ಯಾಮೆರಾ ಎದುರು ಗಂಗಣ್ಣ ತನ್ನ ಬದುಕಿನ ಕಥೆಯನ್ನು ಒರೆಯುತ್ತ ಹೋಗುತ್ತಾನೆ.

ಅನಗತ್ಯ ದೃಶ್ಯವೈಭವ ಮತ್ತು ತಾಂತ್ರಿಕತೆಯ ಮೆರೆದಾಟದ ಜನಪ್ರಿಯ ದಾರಿಯನ್ನು ಬಿಟ್ಟು, ಕಥನವನ್ನೇ ಮುನ್ನೆಲೆಗೆ ತರುವ ಅವರ ಪ್ರಯತ್ನವೇ ನಿರ್ದೇಶಕರು ಸಿನಿಮಾ ಮಾಧ್ಯಮವನ್ನು ಎಷ್ಟು ಗಂಭೀರವಾಗಿ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಸೂಚಿಸುವಂತಿದೆ. ಕ್ಯಾಮೆರಾ ಎದುರಿನ ಮಾತುಗಳ ಏಕತಾನತೆಯನ್ನು ತೊಡೆಯಲು ಅವರು ಫ್ಲ್ಯಾಷ್‌ಬ್ಯಾಕ್‌ಗಳ ಹೆಣಿಗೆಯ ತಂತ್ರವನ್ನು ಅನುಸರಿಸಿದ್ದಾರೆ.

ಹೆಸರು: ಬೆನ್ನಿಗೆಲ್ಲಿಯ ಕಣ್ಣು
ನಿರ್ದೇಶನ: ನರೇಶ ಹೆಗಡೆ ದೊಡ್ಮರಿ
ಕ್ಯಾಮೆರಾ: ಪ್ರಕಾಶ್ ಎಸ್. ಆರ್., ಅಭಿಷೇಕ್ ಹೆಗಡೆ ಶಿರನಾಲ
ಸಂಗೀತ: ಚೇತನ್, ಮನೀಶ್ ಫುಕಾನ್

ಆದರೆ ಹೇಗೆ ಹೇಳಬೇಕು ಎಂಬ ವಿಷಯದಲ್ಲಿ ನಿರ್ದೇಶಕರಿಗೆ ಇರುವ ಸ್ಪಷ್ಟತೆ ಏನನ್ನು ಹೇಳಬೇಕು ಎಂಬ ಕುರಿತು ಇಲ್ಲದಿರುವುದು ಈ ಕಿರುಚಿತ್ರದ ಕೊರತೆ. ಹೀಗೆ ಬಿಡಿ ಬಿಂಬಗಳ ಮೂಲಕ ಒಂದು ಕಥನವನ್ನು ಕಟ್ಟುವ ತಂತ್ರವನ್ನು ಆಯ್ದುಕೊಂಡಾಗ, ಹೇಳದೆ ಉಳಿದಿರುವುದು ನೋಡುಗರ ಮನಸ್ಸಲ್ಲಿ ಬೀರುವ ಪರಿಣಾಮಗಳ ಕುರಿತು ನಿರ್ದೇಶಕನಿಗೆ ಅರಿವು ಇರಬೇಕು. ಒಟ್ಟಾರೆ ಕಥನದ ಕ್ಯಾನ್ವಾಸ್ ಬದುಕಿನ ಯಾವ ಆಯಾಮದ ಬಗ್ಗೆ ಚಿಂತಿಸುವಂತೆ ಪ್ರೇರೇಪಿಸುತ್ತದೆ ಎಂಬ ಕುರಿತು ಸ್ಪಷ್ಟತೆ ಇರಬೇಕು.

'ಹಳ್ಳಿಯಲ್ಲಿನ ಹುಡುಗರಿಗೆ ಮದುವೆಯಾಗಲಿಕ್ಕೆ ಹೆಣ್ಣು ಸಿಗುವುದಿಲ್ಲ' ಎಂಬ ಸಮಸ್ಯೆಯ ಕುರಿತು ಹೇಳಹೊರಡುವ ಕಿರುಚಿತ್ರ, ನಂತರ ಎಲ್ಲರೂ ನಗರಮುಖಿಗಳಾಗಿರುವುದಕ್ಕೆ ಉತ್ತರ ಕೊಡುವ ಜವಾಬುದಾರಿಯನ್ನು ತಲೆಗೇರಿಸಿಕೊಳ್ಳುತ್ತದೆ. ಇವೆರಡೂ ಒಂದಕ್ಕೊಂದು ಸಂಬಂಧ ಇರುವುದು ನಿಜವಾದರೂ, ಹಳ್ಳಿಯ ಬದುಕು ಇಲ್ಲಿ ಹೇಳಿದಷ್ಟು ಸರಳವೂ ಅಲ್ಲ, ಸಮೃದ್ಧವೂ ಅಲ್ಲ. ಸಮಸ್ಯೆಯನ್ನು ಸರಳೀಕರಿಸಿ, ಹರಟೆಯಲ್ಲಿ ವ್ಯಕ್ತವಾಗುವ 'ಸಿದ್ಧಮಾದರಿಯ ಬೀಸು ಹೇಳಿಕೆ'ಗಳನ್ನು ಮತ್ತೆ ನಿರೂಪಿಸುವುದರಲ್ಲಿಯೇ ತಣಿಯುತ್ತದೆ ಈ ಕಿರುಚಿತ್ರ. ಅದಕ್ಕಿಂತ ಆಳಕ್ಕಿಳಿದು, ಸಮಸ್ಯೆಯ ಸಂಕೀರ್ಣತೆಯನ್ನು ಹಿಡಿದಿಡಲು ನಿರ್ದೇಶಕರಿಗೆ ಸಾಧ್ಯವಾಗಿಲ್ಲ. ಜಗತ್ತಿನ ದುಃಖವನ್ನೆಲ್ಲ ತಲೆಮೇಲೆ ಹೊತ್ತುಕೊಂಡ ಹಾಗೆ ಭಾರವಾಗಿಯೇ ಮಾತನಾಡುವ ಗಂಗಣ್ಣನ ಪಾತ್ರಧಾರಿಯ ಸಂಭಾಷಣೆಯೂ ನಿರ್ದೇಶಕರ 'ಸರಳ ಸೂತ್ರ'ಕ್ಕೆ ಪೂರಕವಾಗಿಯೇ ಇದೆ.



ನರೇಶ್ ಹೆಗಡೆ ದೊಡ್ಮರಿ

ಹೀಗೆ ಸಮಸ್ಯೆಯನ್ನು ಬಿಂಬಿಸುವ ಭರದಲ್ಲಿ ಚಿತ್ರದ ಕಥನಕ್ಕಿದ್ದ ಹಲವು ಸಾಧ್ಯತೆಗಳು ಮುಚ್ಚಿಹೋಗಿವೆ. ಉದಾಹರಣೆಗೆ ಎರಡು ಸಲ ಗಂಗಣ್ಣ ಸಾವಿನ ಬೀಸಿನಿಂದ ನೂಲಿನಂತರದಲ್ಲಿ ತಪ್ಪಿಸಿಕೊಂಡು ಬದುಕಿಕೊಂಡಿದ್ದಾನೆ. ಆದರೆ ಆ ಘಟನೆಗಳಾಗಲಿ, ಅದರಿಂದ ಅವನಲ್ಲಿ ಹುಟ್ಟಿದ ಅರಿವಾಗಲಿ ವರದಿಯಂತೆಯೇ ಬಂದುಹೋಗುತ್ತದೆಯೇ ವಿನಾ ಅನುಭವವಾಗಿ ದಾಟುವುದೇ ಇಲ್ಲ. ಹಾಗಾಗಿ ಒಂದು ಹಳ್ಳಿಯ ಚಿತ್ರಣ ಅಥವಾ ವ್ಯಕ್ತಿಯ ಬದುಕಿನ ಕಥನ ಎರಡರಲ್ಲಿ ಯಾವುದನ್ನೂ ಸಮರ್ಥವಾಗಿ ಹೇಳಲು ಸೋಲುತ್ತದೆ.

ಈ ಎಲ್ಲ ಸಮಸ್ಯೆಗಳು ಇದ್ದೂ, ಗಮನಿಸಬೇಕಾದ ಕಿರುಚಿತ್ರ 'ಬೆನ್ನಿಗೆಲ್ಲಿಯ ಕಣ್ಣು'. ಅಂತರ್ಜಾಲದಲ್ಲಿ ಈ ಕಿರುಚಿತ್ರವನ್ನು ಕೊಂಡಿ ಬಳಸಿ ವೀಕ್ಷಿಸಬಹುದು: **bit.ly/2Yue7QO** ■